(ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು ಕಡೆಯುವ ಕಲ್ಲು ಎನ್ನುತ್ತಾರೆ). ಮೆಂತ್ಯಹಿಟ್ಟು, ಚಟ್ನಿಪುಡಿ, ಸಾರಿನ ಪುಡಿ, ಹುಳಿ(ಸಾಂಬಾರ್)ಪುಡಿ, ಕಷಾಯದ ಪುಡಿ, ಬಿಸಿಬೇಳೆಭಾತ್ ಪುಡಿ, ವಾಂಗಿಭಾತ್ ಪುಡಿ, ಪುಳಿಯೋಗರೆ ಪುಡಿ ಇತ್ಯಾದಿ ಪುಡಿಗಳಲ್ಲದೆ ಹುಳಿಗೆ, ದೋಸೆ ಹಿಟ್ಟಿಗೆ, ಇಡ್ಲಿಹಿಟ್ಟಿಗೆ, ವಡೆಹಿಟ್ಟಿಗೆ ಮುಂತಾದವುಗಳಿಗೆ ಆಗೆಲ್ಲಾ ಒರಳುಕಲ್ಲೇ ಗತಿ. ಅದರಲ್ಲಿ ರುಬ್ಬಿ ಮಾಡುವ ಪದಾರ್ಥಗಳಿಗೆ ಇರುವ ರುಚಿಯೇ ಬೇರೆ.

ನಮ್ಮ ಅಮ್ಮನ ಮನೆಗೆ ಸೀತಮ್ಮ ಎಂಬ ಮಡಿಹೆಂಗಸು ಬರುತ್ತಿದ್ದರು. ಬಾಲವಿಧವೆಯಾಗಿದ್ದ ಆಕೆ ಕೆಂಪುಸೀರೆ ಉಟ್ಟು, ತಲೆಗೂದಲು ತೆಗೆದಿದ್ದ ಮಂಡೆಯ ಮೇಲೆ ಬರುವಂತೆ ಸೆರಗನ್ನು ಹೊದ್ದು ಬರುತ್ತಿದ್ದರು. ಅವರಿಗೆ ಹತ್ತಿರದ ಸಂಬಂಧಿಕರು, ಮಕ್ಕಳು ಇರಲಿಲ್ಲ. ಜೀವನೋಪಾಯಕ್ಕಾಗಿ ಅವರು ತಮ್ಮನ್ನು ಕರೆದವರ ಮನೆಗೆ ಹೋಗಿ ಅಡುಗೆ ಕೆಲಸ

